

# ಡೋಂಟ್ ಕೇರ್ ಹುಡುಗಿಯ ಬಾಕಿ ಸಮಾಚಾರ್!

**‘ಅಧ್ಯಕ್ಷ ಇನ್ ಅಮೆರಿಕ’ ಸಿನಿಮಾ ಮೂಲಕ ಗ್ಲ್ಯಾಮರ್ ತುಪ್ಪ ಸವರಲು ಮತ್ತೆ ಬರ್ತಿರೋ ರಾಗಿಣಿಗೆ ಇಂಟರ್‌ನ್ಯಾಷನಲ್ ಲೇವಲ್ಸಿನಿಮಾ ನಿರ್ಮಾಣಮಾಡುವ ಕನಸೂ ಇದೆ.**

■ ಪದ್ಮನಾಭ ಭಟ್

‘ವೀರ ಮದಕರಿ’ಯಿಂದ ಸೊಂಟ ಗಿಲ್ಲಿಸಿಕೊಂಡು ‘ಜುಮ್ ಜುಮ್ಮಾಯಾ’ ಎನ್ನುತ್ತಲೇ ಚಂದನವನಕ್ಕೆ ಬಂದ ರಾಗಿಣಿ ದ್ವಿವೇದಿ ವೃತ್ತಿಬದುಕಿಗೀಗ ಹತ್ತು ವರ್ಷ. ಹೆಸರಿಗೆ ತಕ್ಕ ಹಾಗೆ ಪಡ್ಡೆಗಳ ಎದೆಯೊಳಗೆ ಹಸಿಬಿಸಿ ಪ್ರಣಯರಾಗದ ರಂಗೋಲಿಯಿಟ್ಟ ಹುಡುಗಿ ಇವರು. ಗ್ಲ್ಯಾಮರ್ ಎಂಬ ಪದವೇ ನಾಚಿಕೊಳ್ಳುವಷ್ಟು ಬೋಲ್ಡ್ ಆಗಿ ತೆರೆಯ ಮೇಲೆ ತರಂಗವೆಬ್ಬಿಸಿ, ಹುಡುಗರ ವಿರಹಾಗ್ನಿಗೆ ತುಪ್ಪ ಹಂಚಿದವರು.

‘ರಾಗಿಣಿ ದಪ್ಪ ಆಗ್ಬಿಟ್ರು. ಇವರ ಕೆರಿಯರ್ ಮುಗೀತು’ ಎಂದು ಗಾಂಧಿನಗರದ ಮಂದಿ ಗುಸುಗುಸು ಅನ್ನುತ್ತಿರುವಾಗಲೇ ಕ್ರಾಶ್ ಡಯಟ್ ಮಾಡಿ ದೇಹವಿಳಿಸಿಕೊಂಡು ಬಳ್ಳಿಯಂತಾದವರು. ‘ಕಿಚ್ಚು’, ‘ಟೆರರಿಸ್ಟ್’, ‘ರಾಗಿಣಿ ಐಪಿಎಸ್’ನಂಥ ಸಿನಿಮಾಗಳನ್ನು ಮಾಡಿ ಆ್ಯಕ್ಷನ್‌ಗೂ ಸೈ, ಪರ್ಫಾರ್ಮೆನ್ಸಿಗೂ ಜೈ ಎಂದು ಸಾಬೀತುಮಾಡಲು ಹೆಣಗಿದವರು.

‘ರಾಗಿಣಿಗೆ ಕಮರ್ಷಿಯಲ್ ಸಿನಿಮಾಗಳಲ್ಲಿ ಅವಕಾಶಗಳು ಸಿಕ್ತಿಲ್ಲ. ಹಾಗಾಗಿ ಆಫ್‌ಬೀಟ್ ಸಿನಿಮಾಗಳನ್ನು ಮಾಡ್ತಿದ್ದಾರೆ’ ಎಂಬ ಟೀಕೆಯೂ ಕೇಳಿಬಂದಿತ್ತು. ಇಂಥ ಟೀಕೆಗಳಿಗೆ ರಾಗಿಣಿ ಖಡಕ್ ಆಗಿಯೇ ಉತ್ತರಿಸುತ್ತಾರೆ.

‘ಹೇಳುವವರಿಗೆ ಬೇರೆ ಕೆಲಸ ಇರಲ್ಲ. ಯಾರ ಬಗ್ಗೆಯಾದರೂ ಏನಾದರೂ ಹೇಳುತ್ತಲೇ ಇರುತ್ತಾರೆ. ಅಂಥವರ ಮಾತಿಗೆ ನಾನ್ಯಾಕೆ ಕಿವಿ ಕೊಡಲಿ? ನನಗಿರುವುದು ಒಂದೇ ಬದುಕು. ಅದರಲ್ಲಿ ನನಗೆ ಏನು ಇಷ್ಟವೋ ಅದನ್ನು ಮಾಡ್ತೀನಿ. ನನ್ನದು ಡೋಂಟ್ ಕೇರ್ ಸ್ವಭಾವ. ನಂಗನಿಸಿದ್ದನ್ನು ಮಾಡಿಯೇ ಮಾಡ್ತೇನೆ’ ಎಂದು ಕಣ್ಣೋಟದ ಹರಿತಗುಣವನ್ನು ಮಾತಿನಲ್ಲಿಯೂ ಝಳಪಿಸುತ್ತಾರೆ ರಾಗಿಣಿ.

ಈ ಹುಡುಗಿ ಈಗ ಏನ್ಮಾಡ್ತಿದ್ದಾರೆ? ಅಲ್ಪಕಾಲದ ವಿರಾಮದ ನಂತರ ಮತ್ತೆ ಪಕ್ಕಾ ಕಮರ್ಷಿಯಲ್ ಸಿನಿಮಾವೊಂದರಲ್ಲಿ ಸಖತ್ ಗ್ಲ್ಯಾಮರ್ ಲುಕ್‌ನಲ್ಲಿ ಕಾಣಿಸಿಕೊಂಡು ಅದರ ಬಿಡುಗಡೆಗಾಗಿ ಕಾಯ್ತಿದ್ದಾರೆ. ಅದು ಶರಣ್ ನಾಯಕನಾಗಿ ನಟಿಸಿರುವ ‘ಅಧ್ಯಕ್ಷ ಇನ್ ಅಮೆರಿಕ’.

ಇದು ಔಟ್ ಆ್ಯಂಡ್ ಔಟ್ ಕಾಮಿಡಿ ಸಿನಿಮಾ. ರಾಗಿಣಿ ಕೂಡ ಚಿತ್ರದುದ್ದಕ್ಕೂ ನಗೆಯುಕ್ಕಿಸುತ್ತಲೇ ಇರುತ್ತಾರಂತೆ. ‘ನಾನು ಸ್ವಭಾವತಃ ಫನ್ನಿ. ಸ್ನೇಹಿತರನ್ನು ಬೇಕಾದಷ್ಟು ನಗಿಸ್ತಿರ್ತೀನಿ. ಆದರೆ ತೆರೆಯ ಮೇಲೆ ನಟಿಸಿ ಪ್ರೇಕ್ಷಕರನ್ನು ನಗಿಸುವುದು ಬೇರೆಯೇ ಕೌಶಲ. ನಾನು ಇದುವರೆಗೆ ಪೂರ್ತಿ ಕಾಮಿಡಿ ಪಾತ್ರದಲ್ಲಿ ಕಾಣಿಸಿಕೊಂಡಿರಲಿಲ್ಲ. ಈ ಸಿನಿಮಾದ ಮೂಲಕ ಆ ಕೊರತೆಗೂ ನಿವಾರಣೆ ಆದ ಹಾಗೆ ಆಗಿದೆ. ಈಗ ಯಾರೂ ರಾಗಿಣಿ ಒಂದೇ ಬಗೆಯ ಪಾತ್ರದಲ್ಲಿ ನಟಿಸಿದ್ದಾರೆ ಎಂದು ಹೇಳುವ ಹಾಗಿಲ್ಲ’ ಎನ್ನುತ್ತಾರೆ ರಾಗಿಣಿ. ಶೀರ್ಷಿಕೆಗೆ ತಕ್ಕ ಹಾಗೆ ಇಡೀ ಚಿತ್ರವನ್ನು ಅಮೆರಿಕದಲ್ಲಿ ಚಿತ್ರೀಕರಣ ಮಾಡಲಾಗಿದೆಯಂತೆ. ಬಿಡುಗಡೆಗೆ ಸಜ್ಜಾಗಿರುವ ಈ ಚಿತ್ರವನ್ನು ಜನರು ಖಂಡಿತ ಮೆಚ್ಚಿಕೊಳ್ಳುತ್ತಾರೆ ಎಂಬ ವಿಶ್ವಾಸವೂ ಅವರಿಗಿದೆ.

ಈ ನಡುವೆ ರಾಗಿಣಿ ಕನ್ನಡ ಮತ್ತು ತೆಲುಗು ಎರಡೂ ಭಾಷೆಯಲ್ಲಿ ನಿರ್ಮಾಣವಾಗುತ್ತಿರುವ ಸಿನಿಮಾವೊಂದಕ್ಕೆ ಸಹಿ ಹಾಕಿದ್ದಾರೆ. ಹಾಗೆಯೇ ಎರಡು ಮಹಿಳಾಪ್ರಧಾನ ಚಿತ್ರದ ಕಥೆಯೂ ಚರ್ಚೆಯಾಗುತ್ತಿದೆ. ಜೊತೆಗೆ ಕಿರುತೆರೆಯಲ್ಲಿಯೂ ಅವರು ಹಣ ಹೂಡುತ್ತಿದ್ದಾರಂತೆ. ಹಾಗಾದರೆ ಮುಂದೆ ಸಿನಿಮಾ ನಿರ್ಮಾಣದಲ್ಲಿಯೂ ತೊಡಗಿಕೊಳ್ಳುವ ಆಲೋಚನೆ ಇದೆಯೇ ಎಂದು ಕೇಳಿದರೆ ಹೌದು ಎಂಬಂತೆ ಗೋಣಾಡಿಸುತ್ತಾರೆ. ಎಂಥ ಸಿನಿಮಾಗಳನ್ನು ನಿರ್ಮಾಣ ಮಾಡುತ್ತೀರಿ ಎಂಬ ಪ್ರಶ್ನೆಗೆ ಅವರು ನೀಡುವ ಉತ್ತರ ಅವರ ಮಹತ್ವಾಕಾಂಕ್ಷೆಯನ್ನೂ ಸೂಚಿಸುವಂತಿದೆ.

‘ಖಂಡಿತ ಮುಂದೆ ಸಿನಿಮಾಗಳನ್ನು ನಿರ್ಮಾಣ ಮಾಡುವ ಆಲೋಚನೆ ಇದೆ. ಲೋಕಲ್ ಕೆಟಗೆರಿ ಸಿನಿಮಾಗಳನ್ನೆಲ್ಲ ನಿರ್ಮಾಣ ಮಾಡಲ್ಲ. ನಮ್ ಸಂಸ್ಥೆಯ ಸಿನಿಮಾಗಳು ಇಂಟರ್‌ನ್ಯಾಷನಲ್ ಲೆವಲ್‌ನಲ್ಲಿರುತ್ತವೆ. ಕನ್ನಡ ಸಿನಿಮಾ ಅಂದ್ರೆ ಎಲ್ರೂ ತಿರುಗಿ ನೋಡ್ಬೇಕು ಹಾಗೆ ಮಾಡ್ತೇವೆ’ ಎಂದು ತಡವರಿಸುತ್ತಲೇ ಕನ್ನಡಪ್ರೇಮವನ್ನು ತೆರೆದಿಡುತ್ತಾರೆ. ■